**ಸಾಕ್ಷಿಯನ್ನು ದಿನಾಂಕ 18.10.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ**

ನೋಟೀಸಿನಲ್ಲಿ ಸಹ ಇಂತದ್ದೇ ಐಟಂಗಳನ್ನು ಸಪ್ಲೈ ಮಾಡಿದ್ದೇವೆ ಎಂದು ಹೇಳಿಲ್ಲ. ಆದರೆ ಗಿಫ್ಟ್ ಐಟಂ ಎಂದು ಹೇಳಿದ್ದೇವೆ. ನಂಜುಂಡೇಶ್ವರ ಎಂಟರ್ ಪ್ರೈಸಸ್ ಗೆ ನನ್ನ ಗಂಡ ಪ್ರೊಪರೈಟರ್. ನಾನು ಅದಕ್ಕೆ ಪಾರ್ಟನರ್ ಅಲ್ಲ. ನಾನು ನನ್ನ ಪಿರ್ಯಾದಿಯಲ್ಲಿ ಕೊಟ್ಟಿರುವಂತಹ ಪಾರ್ಟನರ್ ಶಿಪ್ ಡೀಡ್ ನಂಜುಂಡೇಶ್ವರ ಎಂಟರ್ ಪ್ರೈಸಸ್ ಗೆ ಸಂಬಂಧಿಸಿದ್ದಲ್ಲ ಎಂದರೆ ಹೌದು. ನಾನು ನಂಜುಂಡೇಶ್ವರ ಎಂಟರ್ ಪ್ರೈಸಸ್ ಗೆ ಪ್ರೊಪರೈಟರ್ ಆಗಲೀ ಅಥವಾ ಪಾರ್ಟನರ್ ಆಗಲೀ ಆಗದೇ ಇರುವ ಕಾರಣ ನನಗೆ ಈ ಪಿರ್ಯಾದಿಯನ್ನು ಹಾಕಲು ನನಗೆ ಲೋಕ ಸ್ಟಾಂಡಿ ಇಲ್ಲ ಎಂದರೆ ಸರಿಯಲ್ಲ. ನಂಜುಂಡೇಶ್ವರ ಎಂಟರ್ ಪ್ರೈಸಸ್ ಹೆಸರಿನಲ್ಲಿ ಎಲ್ಲಾ ಗಿಫ್ಟ್ ಐಟಂ ಬರುತ್ತಿತ್ತು. ನಂಜುಂಡೇಶ್ವರ ಎಂಟರ್ ಪ್ರೈಸಸ್ ಮತ್ತು ನಂಜುಂಡೇಶ್ವರ ಗಿಫ್ಟ್ ಅಂಡ್ ಸ್ಟೇಷನರಿ ಸೆಂಟರ್ ಎರಡು ಬೇರೆ ಬೇರೆ ಎಂದರೆ ಹೌದು. ಆದರೆ ಎಲ್ಲಾ ವ್ಯವಹಾರ ನನ್ನ ಗಂಡನೇ ನೋಡಿಕೊಳ್ಳುತ್ತಿದ್ದರು. ನಂಜುಂಡೇಶ್ವರ ಎಂಟರ್ ಪ್ರೈಸಸ್ ನಲ್ಲಿ ಬಟ್ಟೆ ಅಂಗಡಿ ಹಾಗೂ ನಂಜುಂಡೇಶ್ವರ ಗಿಫ್ಟ್ ಅಂಡ್ ಸ್ಟೇಷನರಿ ಸೆಂಟರ್ ಗಿಫ್ಟ್ ಐಟಂಗಳನ್ನು ಇಟ್ಟಿದ್ದೆವು.

6. ಆರೋಪಿಗೆ ನಾವು ಗಿಫ್ಟ್ ಐಟಂಗಳು ಮತ್ತು ಫರ್ನಿಚರ್ ಐಟಂಗಳನ್ನು ಸಪ್ಲೈ ಮಾಡಿದ್ದೆವು. ನನ್ನ ಗಂಡ ಸ್ಟಾಕ್ ಅನ್ನು ಡೆಲಿವರಿ ಮಾಡುತ್ತೇವೆ ಎಂದು ಆರೋಪಿಗೆ ಹೇಳಿದ್ದರು ಎಂದರೆ ಸರಿಯಲ್ಲ. ಆರೋಪಿಯೇ ಸ್ಟಾಕ್ ಅನ್ನು ತೆಗೆದುಕೊಂಡು ಹೋಗಿರುತ್ತಾರೆ. ನನ್ನ ಗಂಡ ಎರಡು ಚೆಕ್ ಗಳನ್ನು ಭದ್ರತೆಗಾಗಿ ಕೊಟ್ಟರೆ ಸ್ಟಾಕ್ ಡೆಲಿವರಿ ಮಾಡುತ್ತೇವೆ ಎಂದು ಹೇಳಿದ್ದರು ಎಂದರೆ ಸುಳ್ಳು. ಸ್ಟಾಕ್ ತೆಗೆದುಕೊಂಡಿರುವುದಕ್ಕೆ ಅವರು ಚೆಕ್‌ಗಳನ್ನು ಕೊಟ್ಟಿರುತ್ತಾರೆ. ನಾವು ಆರೋಪಿಯಿಂದ ಭದ್ರತೆಗಾಗಿ ಚೆಕ್ ಗಳನ್ನು ಪಡೆದುಕೊಂಡ ನಂತರ ಸ್ಟಾಕ್ ಅನ್ನು ಡೆಲಿವರಿ ಮಾಡಿರುವುದಿಲ್ಲ ಎಂದರೆ ಸುಳ್ಳು. ಮೊದಲೇ ಸ್ಟಾಕ್ ಗಳನ್ನು ಆರೋಪಿ ಪಡೆದುಕೊಂಡಿರುತ್ತಾರೆ.

7. ಗಿಫ್ಟ್ ಐಟಂಗಳನ್ನು ನಾವು ಖರೀದಿ ಮಾಡುತ್ತೇವೆ. ನಾವು ಖರೀದಿ ಮಾಡಿದಂತಹ ಗಿಫ್ಟ್ ಐಟಂ ರಸೀದಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನನ್ನ ಬಳಿ ಇರುವಂತಹ ರಸೀದಿಗಳನ್ನು ಕೊಡಲು ಸಾಧ್ಯವಾಗುತ್ತದೆ. ಶಿಫ್ಟ್ ಮಾಡುವಾಗ ಕೆಲವು ರಸೀದಿಗಳು ಮಿಸ್ ಆಗಿರುತ್ತವೆ. ನನ್ನ ಗಂಡ ಭದ್ರತೆಗಾಗಿ ಚೆಕ್ ಗಳನ್ನು ಪಡೆದುಕೊಂಡ ಯಾವುದೇ ಐಟಂಗಳನ್ನು ಡೆಲಿವರಿ ಮಾಡಿಲ್ಲ ಎಂದರೆ ಸುಳ್ಳು. ಆರೋಪಿ ಮತ್ತು ನನ್ನ ಗಂಡನ ಮಧ್ಯೆ ಏನೆಲ್ಲಾ ವ್ಯವಹಾರಗಳು ಅಗಿರುತ್ತದೆ

ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಮುಂದುವರೆದು ನನ್ನ ಗಂಡನಿಗೆ ಹುಷಾರಿಲ್ಲದ ಕಾರಣ ನನ್ನ ಸಮಕ್ಷಮದಲ್ಲಿಯೇ ಎಲ್ಲಾ ವ್ಯವಹಾರ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ.

8. ನಾವು ಸ್ಟಾಕ್ ಅನ್ನು ಡೆಲಿವರಿಗೆ ಮಾಡದೇ ಇದ್ದ ಕಾರಣ ಆರೋಪಿಯು ಸುಮಾರು ಬಾರಿ ನನ್ನ ಗಂಡನನ್ನು ಭೇಟಿ ಮಾಡಿ ಕೇಳಿರುತ್ತಾರೆ ಎಂದರೆ ಸುಳ್ಳು. ಅಂಗಡಿಗೆ ಬಾಡಿಗೆಗೆ ಬಂದಿರುತ್ತಾರೆ ಎಂದು ಅಡ್ವಾನ್ಸ್ ಕೊಟ್ಟ ಕೊಡಲೇ ಡೆಲಿವರಿ ಮಾಡಿರುತ್ತೇವೆ. ರಿಟರ್ನ್ ಅಗ್ರಿಮೆಂಟ್ ಮಾಡಿಕೊಂಡು ಆರೋಪಿಗೆ ನನ್ನ ಗಂಡ ಐಟಂಗಳನ್ನು ಡೆಲಿವರಿ ಮಾಡುತ್ತೇವೆ ಎಂದು ಹೇಳಿದ್ದರು ಎಂದರೆ ಸುಳ್ಳು. ಅವರು ನಮ್ಮ ಪಕ್ಕದ ಅಂಗಡಿಯವರಾದ ಕಾರಣ ಆ ರೀತಿ ಯಾವುದೇ ರಿಟರ್ನ್ ಅಗ್ರಿಮೆಂಟ್ ಮಾತುಕತೆ ಆಗಿರುವುದಿಲ್ಲ. ಇಂತಿಷ್ಟು ಐಟಂಗಳು ಎಂದು ಹೇಳಲು ಸಾಧ್ಯವಿಲ್ಲ ಏಕೆಂದರೆ ಅಂಗಡಿಯಲ್ಲಿ ಇದ್ದಂತಹ ಎಲ್ಲಾ ಐಟಂಗಳನ್ನು ಆರೋಪಿಗೆ ಡೆಲಿವರಿ ಮಾಡಿದೆವು. ನಮ್ಮ ಬಳಿ ಯಾವುದೇ ಗಿಫ್ಟ್ ಐಟಂಗಳು ಇರಲಿಲ್ಲ. ಆರೋಪಿಗೆ ಸುಳ್ಳು ಭರವಸೆ ನೀಡಿ ಗಿಫ್ಟ್ ಐಟಂಗಳನ್ನು ಖರೀದಿ ಮಾಡಿ ನಿಮಗೆ ಡೆಲಿವರಿ ಮಾಡಿರುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದೆವು ಎಂದರೆ ಸರಿಯಲ್ಲ. ನಾವು ಯೂವುದೇ ಐಟಂಗಳನ್ನು ಡೆಲಿವರಿ ಮಾಡದೇ ಇರುವ ಕಾರಣ ನಿ.ಪಿ.1ಪ್ರಶ್ನಿತ ಚೆಕ್ ಕಾನೂನು ಬದ್ಧವಾಗಿ ವಸೂಲು ಮಾಡುವಂತಹ ಹಣ ಅಲ್ಲ ಎಂದರೆ ಸರಿಯಲ್ಲ.

9. ನಾವು ಟಿಡಿಎಸ್ ಮತ್ತು ಜಿಎಸ್ ಟಿ ಕಟ್ಟುತ್ತೇವೆ. ಲೆಡ್ಜರ್ ಎಕ್ಸ್ ಟ್ರಾಕ್ಟ್ ನಲ್ಲಿಸ್ಟಾಕ್ ಡೆಲಿವರಿ ಮಾಡಿರುವ ಬಗ್ಗೆ ತೋರಿಸಿಲ್ಲ. ಸ್ಟಾಕ್ ಅನ್ನು ಡೆಲಿವರಿ ಮಾಡಿರುವುದಕ್ಕೆ ನಮ್ಮ ಬಳಿ ದಾಖಲೆ ಇಲ್ಲ ಆದರೆ ಹುಡುಗರು ಇದ್ದಾರೆ. ನಮ್ಮ ಅಂಗಡಿಯಲ್ಲಿ ಇದ್ದಂತಹ ಸ್ಟೇಷನರಿ ಐಟಂಗಳ ಬೆಲೆ ಸುಮಾರು 35ಲಕ್ಷ ಇತ್ತು. ಆದರೆ ನಾವು ಮಾತುಕತೆ ಮಾಡಿ 12ಲಕ್ಷಕ್ಕೆ ಕೊಟ್ಟೆವು. ಐಟಂಗಳನ್ನು ಡೆಲಿವರಿ ಮಾಡಿರುವುದಕ್ಕೆ ಕನ್ ಸೈನ್ ಮೆಂಟ್ ನೋಟ್ ಇರುವುದಿಲ್ಲ. ಅರ್ಜೆಂಟ್ ಇದ್ದ ಕಾರಣ ಬೇಗ ಶಿಫ್ಟ್ ಮಾಡಿಸಿರುತ್ತೇವೆ.

10. ಐಟಂಗಳನ್ನು ಡೆಲಿವರಿ ಮಾಡಿದ ನಂತರ ಪ್ರಶ್ನಿತ ಚೆಕ್ ಅನ್ನು ನಗದೀಕರಣಕ್ಕೆ ಹಾಕಿಕೊಳ್ಳುತ್ತೇವೆ ಎಂದು ನನ್ನ ಗಂಡ ಆರೋಪಿಗೆ ಭರವಸೆ ನೀಡಿದ್ದರು ಎಂದರೆ ಸರಿಯಲ್ಲ. ನಿ.ಪಿ.1 ಚೆಕ್ ಎನ್ ಫೋರ್ಸಿಬಿಲಿಟಿ ಗೆ ಬರುವುದಿಲ್ಲ ಏಕೆಂದರೆ ನಾವು ಯಾವುದೇ ಗೂಡ್ಸ್ ಸಪ್ಲೈ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮತ್ತು ಆರೋಪಿ ಮಾಡುತ್ತಿದ್ದಂತಹ ವ್ಯವಹಾರ ನನಗೆ ಗೊತ್ತಿಲ್ಲ ಆದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

11. ಆರೋಪಿ ನೀಡಿರುವಂತಹ ಪ್ರತಿ ಉತ್ತರವನ್ನು ನನ್ನ ಗಂಡ ಬದುಕಿದ್ದ ಕಾರಣ ಅವರು ನೋಡಿರುತ್ತಾರೆ. ನನಗ ಗೊತ್ತಿಲ್ಲ. ಈ ಪ್ರಕರಣದಲ್ಲಿ ಸಾಕ್ಷ್ಯವನ್ನು ಕೊಡುವ ಪೂರ್ವದಲ್ಲಿ ನಿ.ಪಿ.5ರಲ್ಲಿ ಪ್ರತಿ ಉತ್ತರದಲ್ಲಿ ಇರುವಂತಹ ವಿಚಾರವನ್ನು ಓದಿ ತಿಳಿದುಕೊಂಡಿಲ್ಲ. ಆರೋಪಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ಹಾಕಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**2ನೇ ಎಎಸ್‌ಸಿಜೆ ಮತ್ತು ಎಸಿಜೆಎಂ,**
ಬೆಂಗಳೂರು.